ಹಸಿ–ಒಣ ತ್ಯಾಜ್ಯಗಳಿಂದ ವಿದ್ಯುತ್ ಉತ್ಪಾದನೆ

2291 (2597); ಶ್ರೀ ಹ್ಯಾರಿಸ್ ಎನ್. ಎ. (ಶಾಂತಿನಗರ)

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಎಲ್ಲಾ ವಾರ್ಡ್‌ಗಳಲ್ಲಿ ದಿನಂಪ್ರತಿ ಸಂಗ್ರಹವಾಗುತ್ತಿರುವ ಕಸದ ಸಂಗ್ರಹಣೆಯ ಈಗಿನ ಪ್ರಮಾಣ, ಅದರ ನಿರ್ವಹಣೆ ಮತ್ತು ಅದರಿಂದ ಗೊಬ್ಬರ ಮತ್ತು ವಿದ್ಯುತ್ ತಯಾರಿಕೆಯ ಕುರಿತಾದ ಯೋಜನೆಗಳ ಪ್ರಗತಿಯ ವಿವರಗಳೇನು;

ಆ) ವಿದ್ಯುತ್ ಬೇಡಿಕೆ ನೀಗಿಸಲು ಮತ್ತು ಸಮರ್ಪಕ ಕಸ ವಿಲೇವಾರಿಗೆ ಕಸದಿಂದ ವಿದ್ಯುತ್ ತಯಾರಿಕೆ ಮಾಡುವ ಸರ್ಕಾರದ ಪ್ರಸ್ತಾವನೆಯ ವಿವರಗಳೇನು;

ಇ) ಕಸವನ್ನು ಲ್ಯಾಂಡ್‌ಫಿಲ್ಲಿಂಗ್ ವ್ಯವಸ್ಥೆಯಲ್ಲಿ ಮಾಡುತ್ತಿರುವುದನ್ನು ನಿಲ್ಲಿಸಿ ಯಶಸ್ವಿ ಕಸ ನಿರ್ವಹಣೆಯ ವ್ಯವಸ್ಥೆಯನ್ನು ಜಾರಿಗೆ ತರುವಲ್ಲಿ ಸರ್ಕಾರದ ಕ್ರಮಗಳೇನು?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಎಲ್ಲಾ ವಾರ್ಡ್‌ಗಳಲ್ಲಿ ದಿನಂಪ್ರತಿ ಸಂಗ್ರಹವಾಗುತ್ತಿರುವ ಕಸದ ಪ್ರಮಾಣ ಅಂದಾಜು 3500 ಟನ್ ತ್ಯಾಜ್ಯವನ್ನು ಉತ್ಪಾದನಾ ಹಂತದಲ್ಲಿಯೇ ವಿಂಗಡಣೆ ಮಾಡಲು ಪ್ರೋತ್ಸಾಹಿಸಲು 189 ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು ಬಿ.ಬಿ.ಎಂ.ಪಿ. ಯಿಂದ ಸ್ಥಾಪಿಸಲಾಗಿದ್ದು, ಈ ಕೇಂದ್ರಗಳು ಕೇವಲ ಒಣ ತ್ಯಾಜ್ಯವನ್ನು ಮಾತ್ರ ವಾರ್ಡುಗಳಲ್ಲಿ ಸಂಗ್ರಹಿಸುತ್ತಿವೆ. ಬೃಹತ್ ಪ್ರಮಾಣದಲ್ಲಿ ತ್ಯಾಜ್ಯ ಉತ್ಪಾದನೆ ಮಾಡುವ ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು, ಕಲ್ಯಾಣ ಮಂಟಪಗಳು ಹಾಗೂ ಅಪಾರ್ಟ್‌ಮೆಂಟುಗಳು ಒಂದು ವ್ಯವಸ್ಥೆಯನ್ನು ಮಾಡಿಕೊಂಡು ತಮ್ಮ ಹಂತದಲ್ಲಿಯೇ ತ್ಯಾಜ್ಯದ ನಿರ್ವಹಣೆ ಮಾಡಿಕೊಳ್ಳಲು ಅಥವಾ ಬಿ.ಬಿ.ಎಂ.ಪಿ. ಯಿಂದ ಗುರುತಿಸಲಾದ

ಸರ್ವೀಸ್ ಪ್ರೊವಾಯಡರ್‌ಗಳಿಂದ ನಿರ್ವಹಿಸಿಕೊಳ್ಳಲು ಸೂಚನೆಗಳನ್ನು ನೀಡಲಾಗಿದೆ. ಕಟ್ಟಡ ಮತ್ತು ಭಘ್ನಾವೇಷ ತ್ಯಾಜ್ಯದ ವಿಲೇವಾರಿಗಾಗಿ 8 ಸ್ಥಳಗಳನ್ನು ಗುರುತಿಸಲಾಗಿದೆ. ಮಹಾನಗರ ಪಾಲಿಕೆಯ 13 ಸ್ಥಳಗಳಲ್ಲಿ ವಿಕೇಂದ್ರಿತ ಬಯೋಮಿಥಿನೇಶನ್ ಘಟಕಗಳನ್ನು ಸ್ಥಾಪಿಸಲಾಗಿದ್ದು, ಆ ಪೈಕಿ 9 ಘಟಕಗಳು ಕಾರ್ಯಾರಂಭಿಸಿವೆ.

ಈ ಎಲ್ಲಾ ಕ್ರಮಗಳಿಂದಾಗಿ ಬೆಂಗಳೂರು ಮಹಾನಗರ ಪಾಲಿಕೆಯ ಸಮಸ್ಕರಣಾ ಘಟಕಗಳಿಗೆ ಬರುವ ತ್ಯಾಜ್ಯದ ಪ್ರಮಾಣ ಪ್ರತಿದಿನ 3000 ಟನ್‌ಗೆ ಬಂದಿದೆ. ಈ ತ್ಯಾಜ್ಯವನ್ನು ಕೆಳಕಂಡ ಘಟಕಗಳ ಮೂಲಕ ಸಂಸ್ಕರಿಸಲಾಗುತ್ತಿದೆ:

1.	ಮೆ॥ ಟೆರ್ರಾ ಫಾರ್ಮಾ	1000 ಟನ್ ಪ್ರತಿ ದಿನ
2.	ಮೆ॥ ಎಂ.ಎಸ್.ಜಿ.ಪಿ.	500 ಟನ್ ಪ್ರತಿ ದಿನ
3.	ಬಿಂಗೀಪುರ	900 ಟನ್ ಪ್ರತಿ ದಿನ
4.	ಕೆ.ಸಿ.ಡಿ.ಸಿ.	300 ಟನ್ ಪ್ರತಿ ದಿನ
5.	ಮಾವಳ್ಳಿಪುರ	300 ಟನ್ ಪ್ರತಿ ದಿನ

ಮೇಲ್ಕಾಣಿಸದ ಘಟಕಗಳ ಪೈಕಿ ಬಿಂಗೀಪುರದಲ್ಲಿ ಮಾತ್ರ ಭೂಭರ್ತಿ ಮಾಡಲಾಗುತ್ತಿದೆ.

ತ್ಯಾಜ್ಯದ ಸಂಪೂರ್ಣ ಸಂಸ್ಕರಣೆ ಮಾಡುವ ಉದ್ದೇಶದಿಂದ 7 ಘಟಕಗಳನ್ನು (6 ಹೊಸ ಘಟಕ ಹಾಗೂ 1 ಹಾಲಿ ಇರುವ ಘಟಕದ ವಿಸ್ತರಣೆ) ಸ್ಥಾಪಿಸಲು ಸರ್ಕಾರವು ಮಂಜೂರಾತಿ ನೀಡಿದೆ. ಈ ಹೊಸ ಘಟಕಗಳನ್ನು ಈ ಕೆಳ ಕಾಣಿಸಿದ ಸ್ಥಳಗಳಲ್ಲಿ ಸ್ಥಾಪಿಸಲಾಗುತ್ತಿದೆ:

1.	ಕನ್ನಹಳ್ಳಿ	500 ಟನ್ ಪ್ರತಿ ದಿನ
2.	ಶೀಗೆಹಳ್ಳಿ	200 ಟನ್ ಪ್ರತಿ ದಿನ
3.	ದೊಡ್ಡಬಿದರಕಲ್ಲು	200 ಟನ್ ಪ್ರತಿ ದಿನ
4.	ಲಿಂಗಧೀರನಹಳ್ಳಿ	200 ಟನ್ ಪ್ರತಿ ದಿನ
5.	ಸುಬ್ಬರಾಯನಪಾಳ್ಯ	200 ಟನ್ ಪ್ರತಿ ದಿನ
6.	ಚಿಕ್ಕನಾಗಮಂಗಲ	500 ಟನ್ ಪ್ರತಿ ದಿನ
7.	ಕೆಸಿಡಿಸಿ (ಹಾಲಿ ಘಟಕದ ವಿಸ್ತರಣೆ)	500 ಟನ್ ಪ್ರತಿ ದಿನ
	ಒಟ್ಟು	2300 ಟನ್ ಪ್ರತಿ ದಿನ

ಮುಂದಿನ 2 ತಿಂಗಳುಗಳಲ್ಲಿ ಈ ಘಟಕಗಳು ಸಂಪೂರ್ಣ ಕಾರ್ಯಾರಂಭ ಮಾಡುವ ಗುರಿ ಹೊಂದಲಾಗಿದೆ. ಇದರೊಂದಿಗೆ ನಗರದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯದ ಸಂಪೂಣ ಪ್ರಮಾಣದ ಸಂಸ್ಕರಣೆ ಮಾಡಬಹುದಾಗಿದೆ ಹೊಟೇಲ್ ಉದ್ಯಮದಿಂದ ಉತ್ಪತ್ತಿಯಾಗುವ ತ್ಯಾಜ್ಯವನ್ನು ಸಂಸ್ಕರಿಸಲು ಪ್ರತಿದಿನ 100 ಟನ್ ಸಾಮರ್ಥ್ಯದ ಘಟಕವನ್ನು ಕನ್ನಹಳ್ಳಿ ಪ್ರದೇಶದಲ್ಲಿ ಸ್ಥಾಪಿಸಲಾಗಿದ್ದು, ಹಂತ ಹಂತವಾಗಿ ಇನ್ನೂ 2 ತಿಂಗಳುಗಳಲ್ಲಿ ಸದರಿ ಘಟಕವು ಪೂರ್ಣಪ್ರಮಾಣದಲ್ಲಿ ತ್ಯಾಜ್ಯ ಸಂಸ್ಕರಣೆ ಮಾಡಲಿದೆ. ಇದಲ್ಲದೇ ಖಾಸಗಿ ಸಹಭಾಗಿತ್ವದಲ್ಲಿ ಈ ಕೆಳ ಕಾಣಿಸಿದ ತ್ಯಾಜ್ಯ ನಿರ್ವಹಣಾ ಘಟಕಗಳನ್ನು ಸ್ಥಾಪಿಸಲು ಮಂಜೂರಾತಿ ನೀಡಲಾಗಿದೆ·

1.	ಮೆ॥ ಸತಾರೆಂ ಎಂಟರ್‌ಪ್ರೈಸೆಸ್	1000 ಟನ್ ಪ್ರತಿ ದಿನ
2.	ಮೆ॥ ಆರ್ಗಾನಿಕ್ ವೇಸ್ಟ್ ಇಂಡಿಯಾ	600 ಟನ್ ಪ್ರತಿ ದಿನ
3.	ಮೆ॥ ಎಸ್‌ಎಲ್ ಗ್ರೂಪ್	600 ಟನ್ ಪ್ರತಿ ದಿನ
	ಒಟ್ಟು	2200 ಟನ್ ಪ್ರತಿ ದಿನ

ಈ ಖಾಸಗಿ ಸಹಭಾಗಿತ್ವದ ಘಟಕಗಳು ಕನಿಷ್ಟ ಪಕ್ಷ ಮುಂದಿನ 2 ವರ್ಷಗಳಲ್ಲಿ ಕಾರ್ಯಾರಂಭಿಸಲಿವೆ.

ಈ ಎಲ್ಲ ಘಟಕಗಳು ಸಂಪೂರ್ಣವಾಗಿ ಕಾರ್ಯಾರಂಭಿಸಿದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯದ 150% ಸಂಸ್ಕರಿಸುವ ಸಾಮರ್ಥ್ಯವನ್ನು ಹೊಂದಬಹುದಾಗಿದೆ.

ಆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಸಮರ್ಪಕ ಕಸ ವಿಲೇವಾರಿಯಿಂದ ವಿದ್ಯುತ್ ತಯಾರು ಮಾಡುವ ಕುರಿತು ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಂಡಿರುತ್ತದೆ.

1. ಮಹಾನಗರ ಪಾಲಿಕೆಯು 13 ಸ್ಥಳಗಳಲ್ಲಿ ಪ್ರತಿ ದಿನ 5 ಟನ್ ಹಸಿ ಕಸದಿಂದ ಅನಿಲ/ವಿದ್ಯುತ್ ಉತ್ಪಾದಿಸುವ ವಿಕೇಂದ್ರಿತ ಬಯೋಮಿಥಿನೇಶನ್ ಘಟಕಗಳನ್ನು ಸ್ಥಾಪಿಸಲಾಗಿದ್ದು, ಆ ಪೈಕಿ 9 ಘಟಕಗಳು ಕಾರ್ಯಾರಂಭಿಸಿವೆ.
2. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಖಾಸಗಿ ಸಹಭಾಗಿತ್ವದಲ್ಲಿ ಅನಿಲ/ವಿದ್ಯುತ್ ಉತ್ಪಾದಿಸುವ ಈ ಕೆಳ ಕಾಣಿಸಿದ ತ್ಯಾಜ್ಯ ನಿರ್ವಹಣಾ ಘಟಕಗಳನ್ನು ಸ್ಥಾಪಿಸಲು ಸರ್ಕಾರದ ಅನುಮೋದನೆ ಪಡೆದು ಮುಂದುವರಿತಿ ನೀಡಿದೆ.

1.	ಮೆ॥ ಸತಾರೆಂ ಎಂಟರ್‌ಪ್ರೈಸೆಸ್	1000 ಟನ್ ಪ್ರತಿ ದಿನ
2.	ಮೆ॥ ಆರ್ಗಾನಿಕ್ ವೇಸ್ಟ್ ಇಂಡಿಯಾ	600 ಟನ್ ಪ್ರತಿ ದಿನ
3.	ಮೆ॥ ಎಸ್‌ಎಲ್ ಗ್ರೂಪ್	600 ಟನ್ ಪ್ರತಿ ದಿನ
	ಒಟ್ಟು	2200 ಟನ್ ಪ್ರತಿ ದಿನ

3. ಇದಲ್ಲದೇ ಸರ್ಕಾರದ ಸ್ವಾಮ್ಯದ ಕೆ.ಪಿ.ಟಿ.ಸಿ.ಎಲ್. ಸಂಸ್ಥೆಯ ವತಿಯಿಂದ ಇಂಧನ ಉತ್ಪಾದಿಸಬಹುದಾದ ತ್ಯಾಜ್ಯಗಳಿಂದ ವಿದ್ಯುತ್ ಉತ್ಪಾದಿಸುವ ಘಟಕ ಸ್ಥಾಪಿಸುವ ಕುರಿತು ಪಾಲಿಕೆಯು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದೆ.

ಇ) ಕಸವನ್ನು ಲ್ಯಾಂಡ್‌ಫಿಲ್ಲಿಂಗ್ ವ್ಯವಸ್ಥೆಯಲ್ಲಿ ಮಾಡುತ್ತಿರುವುದನ್ನು ನಿಲ್ಲಿಸಿ ಯಶಸ್ವಿ ಕಸ ನಿರ್ವಹಣೆಯ ವ್ಯವಸ್ಥೆಯನ್ನು ಜಾರಿಗೆ ತರುವಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

ತ್ಯಾಜ್ಯವನ್ನು ಉತ್ಪಾದನಾ ಹಂತದಲ್ಲಿಯೇ ವಿಂಗಡಣೆ ಮಾಡಲು ಪ್ರೋತ್ಸಾಹಿಸಲು 189 ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು ಬಿ.ಬಿ.ಎಂ.ಪಿ. ಯಿಂದ ಸ್ಥಾಪಿಸಲಾಗಿದ್ದು, ಈ ಕೇಂದ್ರಗಳು ಕೇವಲ ಒಣ ತ್ಯಾಜ್ಯವನ್ನು ಮಾತ್ರ ವಾರ್ಡುಗಳಲ್ಲಿ ಸಂಗ್ರಹಿಸುತ್ತಿವೆ. ಬೃಹತ್ ಪ್ರಮಾಣದಲ್ಲಿ ತ್ಯಾಜ್ಯ ಉತ್ಪಾದನೆ ಮಾಡುವ ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು, ಕಲ್ಯಾಣ ಮಂಟಪಗಳು ಹಾಗೂ ಅಪಾರ್ಟ್‌ಮೆಂಟ್‌ಗಳು ಒಂದು ವ್ಯವಸ್ಥೆಯನ್ನು ಮಾಡಿಕೊಂಡು ತಮ್ಮ ಹಂತದಲ್ಲಿಯೇ ತ್ಯಾಜ್ಯದ ನಿರ್ವಹಣೆ ಮಾಡಿಕೊಳ್ಳಲು ಅಥವಾ ಬಿ.ಬಿ.ಎಂ.ಪಿ. ಯಿಂದ ಗುರುತಿಸಲಾದ ಸರ್ವಿಸ್ ಪ್ರೊವೈಡರ್‌ಗಳಿಂದ ನಿರ್ವಹಿಸಿಕೊಳ್ಳಲು ಸೂಚನೆಗಳನ್ನು ನೀಡಲಾಗಿದೆ. ಕಟ್ಟಡ ಮತ್ತು

ಭಘ್ನಾವಶೇಷ ತ್ಯಾಜ್ಯದ ವಿಲೇವಾರಿಗಾಗಿ 8 ಸ್ಥಳಗಳನ್ನು ಗುರುತಿಸಲಾಗಿದೆ. ಮಹಾನಗರ ಪಾಲಿಕೆಯ 13 ಸ್ಥಳಗಳಲ್ಲಿ ವಿಕೇಂದ್ರಿಕೃತ ಬಯೋಮಿಥಿನೇಶನ್ ಘಟಕಗಳನ್ನು ಸ್ಥಾಪಿಸಲಾಗಿದ್ದು, ಆ ಪೈಕಿ 9 ಘಟಕಗಳು ಕಾರ್ಯಾರಂಭಿಸಿವೆ.

ಈ ಎಲ್ಲಾ ಕ್ರಮಗಳಿಂದಾಗಿ ಬೆಂಗಳೂರು ಮಹಾನಗರ ಪಾಲಿಕೆಯ ಸಂಸ್ಕರಣಾ ಘಟಕಗಳಿಗೆ ಬರುವ ತ್ಯಾಜ್ಯದ ಪ್ರಮಾಣ ಪ್ರತಿದಿನ 3000 ಟನ್‌ಗೆ ಬಂದಿದೆ. ಈ ತ್ಯಾಜ್ಯವನ್ನು ಕೆಳಕಂಡ ಘಟಕಗಳ ಮೂಲಕ ಸಂಸ್ಕರಿಸಲಾಗುತ್ತಿದೆ:

1.	ಮೆ॥ ಟೆರ್ರಾ ಫಾರ್ಮಾ	1000 ಟನ್ ಪ್ರತಿ ದಿನ
2.	ಮೆ॥ ಎಂ.ಎಸ್.ಜಿ.ಪಿ.	500 ಟನ್ ಪ್ರತಿ ದಿನ
3.	ಬಿಂಗೀಪುರ	900 ಟನ್ ಪ್ರತಿ ದಿನ
4.	ಕೆ.ಸಿ.ಡಿ.ಸಿ.	300 ಟನ್ ಪ್ರತಿ ದಿನ
5.	ಮಾವಳ್ಳಿಪುರ	300 ಟನ್ ಪ್ರತಿ ದಿನ

ಮೇಲ್ಕಾಣಿಸದ ಘಟಕಗಳ ಪೈಕಿ ಬಿಂಗೀಪುರದಲ್ಲಿ ಮಾತ್ರ ಭೂಭರ್ತಿ ಮಾಡಲಾಗುತ್ತಿದೆ.

ತ್ಯಾಜ್ಯದ ಸಂಪೂರ್ಣ ಸಂಸ್ಕರಣೆ ಮಾಡುವ ಉದ್ದೇಶದಿಂದ 7 ಘಟಕಗಳನ್ನು (6 ಹೊಸ ಘಟಕ ಹಾಗೂ 1 ಹಾಲಿ ಇರುವ ಘಟಕದ ವಿಸ್ತರಣೆ) ಸ್ಥಾಪಿಸಲು ಸರ್ಕಾರವು ಮಂಜೂರಾತಿ ನೀಡಿದೆ. ಈ ಹೊಸ ಘಟಕಗಳನ್ನು ಈ ಕೆಳ ಕಾಣಿಸಿದ ಸ್ಥಳಗಳಲ್ಲಿ ಸ್ಥಾಪಿಸಲಾಗುತ್ತಿದೆ:

1.	ಕನ್ನಹಳ್ಳಿ	500 ಟನ್ ಪ್ರತಿ ದಿನ
2.	ಶೀಗೆಹಳ್ಳಿ	200 ಟನ್ ಪ್ರತಿ ದಿನ
3.	ದೊಡ್ಡಬಿದರಕಲ್ಲು	200 ಟನ್ ಪ್ರತಿ ದಿನ
4.	ಲಿಂಗಧೀರನಹಳ್ಳಿ	200 ಟನ್ ಪ್ರತಿ ದಿನ
5.	ಸುಬ್ಬರಾಯನಪಾಳ್ಯ	200 ಟನ್ ಪ್ರತಿ ದಿನ
6.	ಚಿಕ್ಕನಾಗಮಂಗಲ	500 ಟನ್ ಪ್ರತಿ ದಿನ
7.	ಕೆಸಿಡಿಸಿ (ಹಾಲಿ ಘಟಕದ ವಿಸ್ತರಣೆ)	500 ಟನ್ ಪ್ರತಿ ದಿನ
	ಒಟ್ಟು	2300 ಟನ್ ಪ್ರತಿ ದಿನ

ಮುಂದಿನ 2 ತಿಂಗಳುಗಳಲ್ಲಿ ಈ ಘಟಕಗಳು ಸಂಪೂರ್ಣ ಕಾರ್ಯಾರಂಭ ಮಾಡುವ ಗುರಿ ಹೊಂದಲಾಗಿದೆ. ಇದರೊಂದಿಗೆ ನಗರದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯದ ಸಂಪೂರ್ಣ ಪ್ರಮಾಣದ ಸಂಸ್ಕರಣೆ ಮಾಡಬಹುದಾಗಿದೆ ಹೊಟೇಲ್ ಉದ್ಯಮದಿಂದ ಉತ್ಪತ್ತಿಯಾಗುವ ತ್ಯಾಜ್ಯವನ್ನು ಸಂಸ್ಕರಿಸಲು ಪ್ರತಿದಿನ 100 ಟನ್ ಸಾಮರ್ಥ್ಯದ ಘಟಕವನ್ನು ಕನ್ನಹಳ್ಳಿ ಪ್ರದೇಶದಲ್ಲಿ ಸ್ಥಾಪಿಸಲಾಗಿದ್ದು, ಹಂತ ಹಂತವಾಗಿ ಇನ್ನೂ 2 ತಿಂಗಳುಗಳಲ್ಲಿ ಸದರಿ ಘಟಕವು ಪೂರ್ಣಪ್ರಮಾಣದಲ್ಲಿ ತ್ಯಾಜ್ಯ ಸಂಸ್ಕರಣೆ ಮಾಡಲಿದೆ. ಇದಲ್ಲದೇ ಖಾಸಗಿ ಸಹಭಾಗಿತ್ವದಲ್ಲಿ ಈ ಕೆಳ ಕಾಣಿಸಿದ ತ್ಯಾಜ್ಯ ನಿರ್ವಹಣಾ ಘಟಕಗಳನ್ನು ಸ್ಥಾಪಿಸಲು ಮಂಜೂರಾತಿ ನೀಡಲಾಗಿದೆ:

1.	ಮೆ॥ ಸತಾರೆಂ ಎಂಟರ್‌ಪ್ರೈಸೆಸ್	1000 ಟನ್ ಪ್ರತಿ ದಿನ
2.	ಮೆ॥ ಆರ್ಗಾನಿಕ್ ವೇಸ್ಟ್ ಇಂಡಿಯಾ	600 ಟನ್ ಪ್ರತಿ ದಿನ
3.	ಮೆ॥ ಎಸ್‌ಎಲ್ ಗ್ರೂಪ್	600 ಟನ್ ಪ್ರತಿ ದಿನ
	ಒಟ್ಟು	2200 ಟನ್ ಪ್ರತಿ ದಿನ

ಈ ಖಾಸಗಿ ಸಹಭಾಗಿತ್ವದ ಘಟಕಗಳು ಕನಿಷ್ಟ ಪಕ್ಷ ಮುಂದಿನ 2 ವರ್ಷಗಳಲ್ಲಿ ಕಾರ್ಯಾರಂಭಿಸಲಿವೆ.

ಈ ಎಲ್ಲ ಘಟಕಗಳು ಸಂಪೂರ್ಣವಾಗಿ ಕಾರ್ಯಾರಂಭಿಸಿದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯದ 150% ಸಂಸ್ಕರಿಸುವ ಸಾಮರ್ಥ್ಯವನ್ನು ಹೊಂದಬಹುದಾಗಿದೆ.

ಖಾಲಿ ಇರುವ ಸರ್ಕಾರಿ ನೌಕರರ ಹುದ್ದೆಗಳು

2292 (2598); ಶ್ರೀ ಹ್ಯಾರಿಸ್ ಎನ್. ಎ. (ಶಾಂತಿನಗರ)

ಅ) ರಾಜ್ಯದಲ್ಲಿ ವಿವಿಧ ಇಲಾಖೆಗಳಲ್ಲಿ ನಿವೃತ್ತಿ ಮತ್ತಿತರ ಕಾರಣಗಳಿಂದ ಖಾಲಿ ಇರುವ ವಿವಿಧ ವರ್ಗಗಳ ಒಟ್ಟು ಹುದ್ದೆಗಳ ಸಂಖ್ಯೆಯೆಷ್ಟು; (ವಿವರ ನೀಡುವುದು);

ಆ) ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಸರ್ಕಾರದ ಮುಂದಿರುವ ಪ್ರಸ್ತಾವನೆಗಳೇನು;

ಇ) ಸಮರ್ಪಕ ಆಡಳಿತ ನಿರ್ವಹಣೆ ದೃಷ್ಟಿಯಿಂದ ಹಾಗೂ ನಿರುದ್ಯೋಗಿ ಯುವಕ ಯುವತಿಯರಿಗೆ ಸರ್ಕಾರದ ಆಡಳಿತ ವ್ಯವಸ್ಥೆಯಲ್ಲಿ